749 (1249) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ನೀರಾವರಿ ಕೆರೆ ನಿರ್ಮಿಸಲು ಹಾಗೂ ಅಭಿವೃದ್ಧಿ ಪಡಿಸಲು ಕಳೆದ 3 ವರ್ಷಗಳಿಂದ ರಾಜ್ಯಕ್ಕೆ ನಬಾರ್ಡ್‌ನಿಂದ ಬಂದಿರುವ ಹಣ ಎಷ್ಟು ,

ಆ) ಈ ಹಣವನ್ನು ಪ್ರತಿ ಜಿಲ್ಲೆಗೆ ಎಷ್ಟೆಷ್ಟು ಪ್ರಮಾಣದಲ್ಲಿ ಹಂಚಿಕೆ ಮಾಡಲಾಗಿದೆ ,

ಇ) ಈ ಹಣದಿಂದ ಬೀದರ್ ಜಿಲ್ಲೆಯಲ್ಲಿ ಕೈಗೊಂಡಿರುವ ಸಣ್ಣ ನೀರಾವರಿ ಕಾಮಗಾರಿಗಳು ಯಾವುವು ಹಾಗೂ ಈ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಯಿತು , (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು) ,

ಈ) ಈ ಕಾಮಗಾರಿಗಳ ಪೈಕಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ಹಾಗೂ ಎಷ್ಟು ಅಪೂರ್ಣವಾಗಿವೆ ,

ಉ) ಅಪೂರ್ಣವಾಗಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಮಿತಿಯನ್ನು ನಿಗದಿಪಡಿಸಲಾಗಿದೆಯೇ ,

ಊ) ಹಾಗಿದ್ದಲ್ಲಿ, ಆ ಕಾಲ ಮಿತಿ ಎಷ್ಟು ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ಸಣ್ಣ ನೀರಾವರಿ ಇಲಾಖೆಯಲ್ಲಿ ಕೆರೆಗಳನ್ನು ನಿರ್ಮಿಸಲು, ಏತ ನೀರಾವರಿ ಯೋಜನೆ ನಿರ್ಮಾಣ, ಅಣೆಕಟ್ಟು/ಪಿಕಪ್/ಬಾಂದಾರ ನಿರ್ಮಾಣ ಹಾಗೂ ಅಸ್ಥಿತ್ವದಲ್ಲಿರುವ ಯೋಜನೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿಗಳು ಸೇರಿದಂತೆ 2004–05ರಲ್ಲಿ ರೂ 4871 00 ಲಕ್ಷ 2005–06 ರಲ್ಲಿ ರೂ 6083 00 ಲಕ್ಷಗಳ ಮರುಪಾವತಿಯನ್ನು ನಬಾರ್ಡ್ ಸಂಸ್ಥೆಯಿಂದ ಪಡೆಯಲಾಗಿದೆ

ಆ) ರಾಜ್ಯ ಸರ್ಕಾರವು ಇಲಾಖೆಗೆ ನಿಗಧಿಪಡಿಸುವ ಆಯವ್ಯಯ ಅನುದಾನದಲ್ಲಿ ನಬಾರ್ಡ್ ಕಾಮಗಾರಿಗಳ ನಿರ್ಮಾಣಕ್ಕೆ ಹಣವನ್ನು ಪಾವತಿಸಿದ ನಂತರ ನಬಾರ್ಡ್ ಸಂಸ್ಥೆಯಿಂದ ಮರುಪಾವತಿಯನ್ನು ಪಡೆಯುವುದರಿಂದ ನಬಾರ್ಡ್‌ನಿಂದ ಬರುವ ಹಣವನ್ನು ಹಂಚಿಕೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಅನುಬಂಧದಲ್ಲಿ ನೀಡಲಾಗಿದೆ

ಈ) ಒಟ್ಟು 25 ಕಾಮಗಾರಿಗಳ ಪೈಕಿ 3 ಕಾಮಗಾರಿಗಳು ಪೂರ್ಣಗೊಂಡಿದ್ದು, 19 ಕಾಮಗಾರಿಗಳು ಪ್ರಗತಿಯಲ್ಲಿವೆ, 2 ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ ಹಾಗೂ 1 ಕಾಮಗಾರಿ ಅಪೂರ್ಣ ಸ್ಥಿತಿಯಲ್ಲಿದೆ

ಉ) ಔರಾದ್ ತಾಲ್ಲೂಕಿನ ಆಲೂರು–ಬೇಲೂರು ಕೆರೆ ಕಾಮಗಾರಿಯು ಅಪೂರ್ಣ ಸ್ಥಿತಿಯಲ್ಲಿದ್ದು, ಕಾಮಗಾರಿಯ ಮೊತ್ತದಲ್ಲಿ ಹೆಚ್ಚಳವಾದ ಕಾರಣ

ವರಿಷ್ಕೃತ ಅಂದಾಜು ಪತ್ರಿಕೆಗೆ ಅನುಮೋದನೆ ಬೇಕಾಗಿದೆ ಅನುಮೋದನೆ ದೊರೆತ ನಂತರ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಜರುಗಿಸಲಾಗುವುದು

ಊ) ಮಾರ್ಚ್ 2008

750 (1250) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಜನತೆ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಜನತೆಯ ಹಿತದೃಷ್ಟಿಯಿಂದ ರಾಜ್ಯದಲ್ಲಿ ಸಾರಾಯಿ ಮಾರಾಟವನ್ನು ನಿಷೇಧಿಸಲು ಸರ್ಕಾರ ಚಿಂತನೆ ನಡೆಸಿರುವುದು ನಿಜವೇ ,

ಆ) ಹಾಗಿದ್ದಲ್ಲಿ, ಇದರ ಜೊತೆ ಸೇಂದಿ ಮತ್ತು ನೀರಾವನ್ನು ಕೂಡ ನಿಷೇಧಿಸಲಾಗುವುದೇ ,

ಇ) ಹಾಗಿಲ್ಲದಿದ್ದಲ್ಲಿ, ಕಾರಣಗಳೇನು ,

ಈ) ರಾಜ್ಯದಲ್ಲಿ ಸಾರಾಯಿ ಮಾರಾಟವನ್ನು ರದ್ದುಪಡಿಸಿದಲ್ಲಿ ಇದರಿಂದ ಬರುತ್ತಿರುವ ಆದಾಯವನ್ನು ಬೇರೆ ಯಾವ ಮೂಲಗಳಿಂದ ತುಂಬಲಾಗುವುದು ,

ಉ) ರಾಜ್ಯದಲ್ಲಿ ಸಾರಾಯಿ ಮಾರಾಟ ಉದ್ಯಮದಲ್ಲಿ ತೊಡಗಿಸಿಕೊಂಡಿರುವ ಕಾರ್ಮಿಕರ ಅಂದಾಜು ಸಂಖ್ಯೆ ಎಷ್ಟು ,

ಊ) ಸಾರಾಯಿಯನ್ನು ನಿಷೇಧಿಸಿರುವುದರಿಂದ ಈ ಕೆಲಸದಲ್ಲಿ ತೊಡಗಿಸಿಕೊಂಡಿರುವ ಕಾರ್ಮಿಕರು ಕೆಲಸ ಕಳೆದುಕೊಂಡು ಅತಂತ್ರ ಸ್ಥಿತಿಗೆ ಬರುವುದಿಲ್ಲವೇ ,

ಋ) ಹಾಗಿದ್ದಲ್ಲಿ, ಸರ್ಕಾರ ಇವರಿಗೆ ಉದ್ಯೋಗಕ್ಕೆ ಯಾವ ಪರ್ಯಾಯ ಮಾರ್ಗವನ್ನು ಕಲ್ಪಿಸಲಾಗುವುದೇ ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) ಹೌದು

ಆ) ಸೇಂದಿ ಮಾರಾಟವನ್ನು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಹೊರತುಪಡಿಸಿ, ರಾಜ್ಯಾದಾದ್ಯಂತ ನಿಷೇಧಿಸಲಾಗಿದೆ ನೀರಾವನ್ನು ಮಾರಾಟ ಮಾಡಲು ಸರ್ಕಾರವು ಇದುವರೆಗೆ ಅನುಮತಿ ನೀಡದೆ ಇರುವುದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮೂರ್ತೆದಾರರುಗಳ ಜೀವನೋಪಾಯಕ್ಕೆ ಮಾರ್ಗವಾಗಿ ಮತ್ತು ಈ ಜಿಲ್ಲೆಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಸೇಂದಿ ಮರಗಳಿದ್ದುದನ್ನು ಗಮನದಲ್ಲಿಟ್ಟುಕೊಂಡು ಸೇಂದಿ ಮಾರಾಟವನ್ನು ನೋಂದಾಯಿತ ಮೂರ್ತೆದಾರರ ಸೇವಾ ಸಹಕಾರ ಸಂಘಗಳಿಂದ ಮಾರಾಟ ಮಾಡಲಾಗುತ್ತಿದೆ

P2
20